# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-8677/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ:09-01-2018

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ವಿಶ್ವನಾಥ ತಂದೆ ಹೊನ್ನೇಗೌಡ, ವಾಸ:ಕಲ್ಲಹಳ್ಳಿ ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಶ್ರೀ ವಿಶ್ವನಾಥ ತಂದೆ ಹೊನ್ನೇಗೌಡ, ವಾಸ:ಕಲ್ಲಹಳ್ಳಿ ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ಉಪ-ವಿಭಾಗ, ಹಾಸನ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಕಟ್ಟಾಯ ಹೋಬಳಿಗೆ ಸೇರಿದ ಚೌಡಹಳ್ಳಿ ಕ್ರಾಸನಿಂದ ಶೆಟ್ಟಿಹಳ್ಳಿಯವರೆಗೆ ರಸ್ತೆ ಡಾಂಬರೀಕರಣವನ್ನು 2 ವರ್ಷದಿಂದ ಮಾಡಿದ್ದು, ಒಂದು ತಿಂಗಳಿನಲ್ಲಿಯೇ ರಸ್ತೆ ಹಾಳಾಗಿದೆ. ಕಾಮಗಾರಿ ನಡೆದ ಕೆಲವು ದಿನಗಳಲ್ಲಿ ಡಾಂಬರ್ ಕಿತ್ತು ಹೋಗಿದ್ದು, ರಸ್ತೆ ತಿರುಗಾಡಲು ಅನುಪಯುಕ್ತವಾಗಿದೆ. ಆದ್ದರಿಂದ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 55 ಲಕ್ಷ ರೂಪಾಯಿಗಳ ತಾಂತ್ರಿಕ ಮಂಜೂರಾತಿ ಆದ ರಸ್ತೆ ಅಭಿವೃದ್ಧಿ ಕಾಮಗಾರಿ ಹಳ್ಳಿಬೈಲು ರಸ್ತೆ 0.00 ಕಿ.ಮೀ ಇಂದ 8.80 ಕಿ.ಮೀ ರವರೆಗೆ ಉದ್ದ ಇರುತ್ತದೆ. ಟೆಂಡರ್ ಮುಖಾಂತರ ಶ್ರೀ ರಮೇಶ್ ಕುಮಾರ್ ಪ್ರಥಮ ದರ್ಜೆ ಗುತ್ತಿಗೆದಾರರು, ಹಾಸನ ರವರು ನಿರ್ವಹಿಸಿದ್ದಾರೆ. ಟೆಂಡರ್ 2012 ಕ್ಕೆ ಅದನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ, ಮಾರ್ಚ್ 2013 ರಂದು ಪೂರ್ಣಗೊಳಿಸಿದ್ದಾರೆ. ಗುಣಭರವಸೆಯ ಪರೀಕ್ಷಾ ವರದಿಯನ್ನು ಮಾಡಲಾಗಿದೆ. ಕಾಮಗಾರಿ ಮುಕ್ತಾಯ ದೃಢೀಕರಣ

ಪತ್ರ ಪಡೆಯಲಾಗಿದೆ. ಅಂದಿನ ಸಮಯದಲ್ಲಿ ಶ್ರೀ ಎನ್. ಕೃಷ್ಣಯ್ಯ ಎ.ಇ.ಇ. ಆಗಿದರು. ಅವರು ಅಂತಿಮ ಬಿಲ್ಲಿಗೆ ಸಹಿ ಹಾಕಿದ್ದಾರೆ. ದಿನಾಂಕ: 29-6-2013 ರಂದು ವಯೋನಿವೃತ್ತಿ ಹೊಂದಿದ್ದಾರೆ. ದಾಖಲಾತಿಗಳನ್ನು ಪರಿಶೀಲಿಸಿದಾಗ, ಶ್ರೀಆರ್.ಮಂಜುನಾಥ, ಎ.ಇ.ಇ. ರವರು ಗುತ್ತಿಗೆದಾರರಿಗೆ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡಲು ಸೂಚಿಸಿದ್ದಾರೆ. ದಿನಾಂಕ: 22-2-2014 ರಂದು ಕಾರ್ಯಪಾಲಕ ಇಂಜಿನಿಯರವರು ಪತ್ರ ಬರೆದು ಹಾಳಾಗಿರುವ ಭಾಗದ ರಸ್ತೆ ದುರಸ್ಥಿಗೊಳಿಸಲು ಸೂಚಿಸಿರುತ್ತಾರೆ. ದಿನಾಂಕ:1-3-2014 ರಂದು ಹಾಳಾಗಿರುವ ಭಾಗಗಳನ್ನು ಸರಿಪಡಿಸಲಾಗಿದೆ ಮುಂದಿನ ನಿರ್ವಹಣೆ ಮಾಡಲಾಗುತ್ತಿದೆ ಅಂತ ವರದಿ ಸಲ್ಲಿಸಲಾಗಿದೆ.

(ಬಿ) ಮುಂದುವರೆದು, ಗುತ್ತಿಗೆದಾರರ ನಿರ್ವಹಣ ಅವಧಿ ಮಾರ್ಚ್-2015 ರವರಗೆ ಇತ್ತು ಅದು ಸಹ ಪೂರ್ಣಗೊಂಡಿದೆ. ದೂರುದಾರರು 2015 ರಲ್ಲಿ ಮಾಹಿತಿ ಹಕ್ಕು ಅಧಿನಿಯಮದಲ್ಲಿ ಕೋರಿದ ಮಾಹಿತಿಯನ್ನು ಕೊಡಲಾಗಿದೆ. ದಿನಾಂಕ:25-6-2015 ರಿಂದ ನಾನು ಕರ್ತವ್ಯ ನಿರ್ವಹಿಸುತ್ತಿದ್ದು ರಸ್ತೆಯಲ್ಲಿ ಬಿದಿದ್ದ ಗುಂಡಿಗಳನ್ನು ಮುಚ್ಚಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಅಂತ ಆಕ್ಷೇಪಣೆ ಸಲ್ಲಿಸಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರ ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಕಿ.ಮೀ. 2.70 ರಿಂದ 6.10 ಕಿ.ಮೀ ರವರೆಗೆ ಮಾತ್ರ ಡಾಂಬರೀಕರಣವಾಗಿದೆ. ಉಳಿದಂತೆ ಕೆಲಸ ಮಾಡದೇ ಇದ್ದರೂ ಗುತ್ತಿಗೆದಾರರಿಗೆ ಬಿಲ್ ಪಾವತಿ ಆಗಿದೆ. ಆದ್ದರಿಂದ ಸ್ಥಳ ಪರಿಶೀಲನೆ ಮಾಡುವಂತೆ ಕೋರಿಕೊಂಡಿರುತ್ತಾರೆ.

5. ವಿವಾದಿತ ಕಾಮಗಾರಿಯ ಟೆಂಡರ ಮೊತ್ತವನ್ನು ಅವಧಿಗೆ ಮೊದಲೇ ಅಥವಾ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಹಣ ಬಿಡುಗಡೆ ಮಾಡಿಲ್ಲ ಅಂತ ಸಹಾಯಕ ಕಾರ್ಯಪಾಲಕ ಇಂಜಿನಿಯರವರು ತಿಳಿಸುತ್ತಾ ಬಿಲ್ಲಿನ ನಕಲುಗಳನ್ನು ಸಲ್ಲಿಸಿದ್ದಾರೆ. ದೂರುದಾರರ ಪ್ರಕಾರ ಪೂರ್ತಿ 8.80 ಕಿ.ಮೀ. ಡಾಂಬರೀಕರಣ ಮಾಡಿಲ್ಲ. ಭಾಗಶ: ಮಾಡಲಾಗಿದೆ. ಸ್ಥಳ ಪರಿಶೀಲನೆ ಮಾಡಿದರೆ ಮಾತ್ರ ತಿಳಿಯುತ್ತಿದೆ ಅಂತ ಹೇಳುತ್ತಿದ್ದಾರೆ. ರಸ್ತೆ ಬದಿಯಲ್ಲಿ ಜಂಗಲ್ ಕಡಿಯುವುದು, ಹಾಳದ ಪ್ಯಾರಪೆಟ್ ಗೋಡೆಗಳನ್ನು ಸರಿಪಡಿಸುವುದು ಇನ್ನಿತರ ಯಾವುದೇ ಕಾಮಗಾರಿ ಸರಿಯಾದ ಕ್ರಮದಲ್ಲಿ ಮಾಡಿಲ್ಲ ಅಂತ ಹೇಳುತ್ತಿರುವ ವಿಷಯಗಳಲ್ಲೇ ತಾಂತ್ರಿಕ ವಿಭಾಗಕ್ಕೆ ಸಂಬಂಧಿಸಿದೆ. ತಾಂತ್ರಿಕವಾಗಿ ತನಿಖೆ ಆಗದೇ ನಿಖರವಾಗಿ ಯಾವುದೇ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಪ್ರಕರಣವನ್ನು ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ

ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿ ಸದರಿ 8.80 ಕಿ.ಮೀ ಉದ್ದದ ರಸ್ತೆಯ ಕಾಮಗಾರಿ ನಿರ್ವಹಣೆ ಸಮರ್ಪಕವಾಗಿ ಇದಿಯೇ ಎನ್ನುವ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿತ್ತು.

6. ಅದರಂತೆ, ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಈ ಪ್ರಕರಣದಲ್ಲಿ ತನಿಖೆಯನ್ನು ಮಾಡಿಸಿ ವರದಿಯನ್ನು ಸಲ್ಲಿಸಿರುತ್ತಾರೆ.

(ಎ) ತನಿಖಾಧಿಕಾರಿಗಳು ವರದಿಯಲ್ಲಿ ವಿವಾದಿತ ರಸ್ತೆಯನ್ನು ದಿನಾಂಕ: 10-3-2013 ರಂದು ಪೂರ್ಣಗೊಳಿಸಲಾಗಿದೆ. ತನಿಖೆಯ ವೇಳೆಗೆ 4.5 ವರ್ಷಗಳು ಗತಿಸಿರುತ್ತವೆ, ಆದರೂ ಸಹ ಬಹುತೇಹ ಭಾಗವು ತೃಪ್ತಿಕರ ಸ್ಥಿತಿಯಲ್ಲಿವೆ. ಕೆಲವು ಸರಪಳಿಗಳಲ್ಲಿ ರಸ್ತೆಯಲ್ಲಿ ಗುಂಡಿ ಬಿದ್ದಿದ್ದು ನಿರ್ವಹಣೆಯ ಅವಶ್ಯಕತೆ ಇರುತ್ತದೆ. ದೂರುದಾರರು ಮಾಡಿರುವ ಆಪಾದನೆಗಳು ಸಾಬೀತಾಗಿಲ್ಲ ಅಂತ ಅಭಿಪ್ರಾಯಪಟ್ಟಿರುತ್ತಾರೆ. ಜಂಗಲ್ ತೆಗೆಯುವುದು ಮತ್ತು ಚರಂಡಿಗಾಗಿ ಅಗೆತದ ಕಾಮಗಾರಿಗಳು ಅಳತೆಗೆ ಸಿಲುಕದ ಕೆಲಸಗಳಾಗಿರುತ್ತವೆ. ಆದ್ದರಿಂದ, ಈ ಬಗ್ಗೆ ಯಾವುದೇ ಅಭಿಪ್ರಾಯ ನೀಡಲು ಸಾಧ್ಯವಾಗುವುದಿಲ್ಲ.

7. ತನಿಖಾ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಗುತ್ತಿಗೆದಾರರು ಯಾವುದೇ ನಿರ್ವಹಣೆಯ ಜಂಗಲ್ ತೆಗೆಯದೇ ಗುಂಡಿ ಮುಚ್ಚಲು ಸತಾಯಿಸಿ ಅವಧಿ ಮುಗಿದ ಮೇಲೆ ಟೆಂಡರ್ ಕರೆದು ಗುಂಡಿಯನ್ನು ಮುಚ್ಚಿಸಿರುತ್ತಾರೆ. ಆದರೂ ಸಹ 2.60 ಕೀ.ಮೀ ಗುಂಡಿ ಮುಚ್ಚಿರುವುದಿಲ್ಲ. ಚರಂಡಿ ತೆಗೆಯಲು ಹೊಸ ಟೆಂಡರ್ ಕರೆದಿದ್ದಾರೆ ಎಂದು ಆಪಾದಿಸಿದ್ದಾರೆ.

8. ಈ ಪ್ರಕರಣದ ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದೇನೆ. ತನಿಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದಾಗ, ಕಟ್ಟಾಯದಿಂದ ಹಳ್ಳಿ ಬಯಲು ರಸ್ತೆಯವರೆಗೆ ಆಯ್ದ ಭಾಗಗಳವರೆಗೆ ಅಭಿವೃದ್ಧಿ ಕಾಮಗಾರಿ ಮಾಡಲಾಗಿದೆ. ಗುತ್ತಿಗೆದಾರರು 2 ವರ್ಷಗಳವರೆಗೆ ನಿರ್ವಹಣೆ ಮಾಡುವ ಜವಾಬ್ದಾರಿ ಇರುತ್ತದೆ. ಗುಣ ಭರವಸೆಯು ತೃಪ್ತಿಕರವಾಗಿದೆ. ರಸ್ತೆಗೆ ಹಾಕಿರುವ ಜಲ್ಲಿ ಮತ್ತು ಡಾಂಬರ್ ಗುಣಮಟ್ಟದಿಂದ ಕೂಡಿದೆ. ಸರಾಸರಿ 25.30 ಮೀಲಿ ಮೀಟರ್ ಅಳತೆ ಇರುತ್ತದೆ ಅಂತ ಅಭಿಪ್ರಾಯಪಟ್ಟಿದ್ದಾರೆ.

9. ವಿವಾದಿತ ರಸ್ತೆಯನ್ನು ಪರಿಶೀಲನೆ ಮಾಡುವಾಗ, ಗುತ್ತಿಗೆದಾರರ ನಿರ್ವಹಣಾ ಅವಧಿಯು ಸಹ ಮುಗಿದಿತ್ತು ಎನ್ನುವುದು ಕಂಡುಬರುತ್ತದೆ. ರಸ್ತೆಯಲ್ಲಿ ಸರಪಳಿ ನಂ.3.900 ಕಿಮೀ.ನಲ್ಲಿ 1.50 ಮೀಟರ * 1 ಮೀಟರ್ ಅಗಲದ ಒಂದು ಗುಂಡಿ ಇರುತ್ತದೆ. ಸರಪಳಿ 3.100 ಯಿಂದ 3.200 ಕಿಮೀ.ನಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಗುಂಡಿಗಳು ಬಿದ್ದಿರುತ್ತವೆ, ಸರಪಳಿ 8.605 ಯಿಂದ 8.865 ಕೀ.ಮೀ.ನಲ್ಲಿ ಅನೇಕ ಸಣ್ಣಪುಟ್ಟ ಗುಂಡಿಗಳು ಬಿದ್ದಿರುತ್ತವೆ ಅಂತ ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿರುವುದರಿಂದ ಮತ್ತು The Indian Road Congress 2002 ರಲ್ಲಿ ಪ್ರಕಟಿಸಲಾಗಿರುವ Rural Roads Manual ಪ್ರಕಾರ 25 ಮೀ.ಮೀ ದಪ್ಪದ ಡಾಂಬರ್ ಅಳವಡಿಸಿ ನಿರ್ಮಿಸಲಾದ ಗ್ರಾಮೀಣ ರಸ್ತೆಯ ಆಯುಷ್ಯವು ಸುಮಾರು 5 ವರ್ಷಗಳಾಗಿರುತ್ತದೆ ಅಂತ ತನಿಖಾಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ.

10. ಆದ್ದರಿಂದ, ವಿವಾದಿತ ರಸ್ತೆ ಕಾಮಗಾರಿಯಾದ ಕಟ್ಟಾಯ ಹೋಬಳಿಯ ಚೌಡಹಳ್ಳಿ ಕ್ರಾಸ್‌ನಿಂದ ಶೆಟ್ಟಿಹಳ್ಳಿ ವರೆಗಿನ ರಸ್ತೆಯಲ್ಲಿ ಉಂಟಾಗಿರುವ ದೊಡ್ಡ ಗಾತ್ರದ ಮತ್ತು ಸಣ್ಣ ಪುಟ್ಟ ಗುಂಡಿಗಳನ್ನು ಮುಚ್ಚಿಸಿ, ರಸ್ತೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರ ಅಡಿಯಲ್ಲಿ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 9.1.18

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ